**Samyukta Karnāṭaka vom Samstag, 3. Februar 2007, Seite 2 (Mangalore-Ausgabe): Jarmaniyalloṃdu kannaḍa rakta! Elli hōyitu namma prēma...?**

(Über Kannaḍa-Professor Dr. Robert Zydenbos und seine Arbeit beim Mahāmastakābhiṣekha in Dharmasthala)

# ಜರ್ಮನಿಯಲ್ಲೊಂದು ಕನ್ನಡ ರಕ್ತ ! ಎಲ್ಲಿ ಹೋಯಿತು ನಮ್ಮ ಪ್ರೇಮ....?

ರಾಘವ ಶರ್ಮ



> ಗುರುವಾರದಂದು ಧರ್ಮಸ್ಥಳದಲ್ಲಿ ನಡೆದ ವಿದ್ವತ್ ಸಮ್ಮೇಳನದಲ್ಲಿ ಇವರನ್ನು ಗೌರವಿಸಿ ಸನ್ಮಾನಿಸಲಾಗಿದೆ. ಈ ಬಗ್ಗೆ ಅವರಲ್ಲಿ ಪ್ರಶ್ನಿಸಿದರೆ "ಓಹ್..! ಅದಂತೂ ತೀರಾ ಅನಿರೀಕ್ಷಿತ! ಯಾರೋ ಕಾರ್ಯಕ್ರಮ ಇದೆ ಎಂದಾಗ ಅಲ್ಲಿಗೆ ಭಾಗವಹಿಸಲು ಹೋಗಿದ್ದೆ. ಆದರೆ ಹೆಗ್ಗಡೆಯವರು ನನಗೆ ಸನ್ಮಾನವನ್ನೇ ಮಾಡಿದರು.. ತುಂಬಾ ಆನಂದದ ಅನುಭವವಾಯಿತು.. ಎನ್ನುತ್ತಾರೆ.

'ಕರ್ನಾಟಕದ ಕನ್ನಡಿಗರು 'ಕಂಗ್ಲಿಷ್'ನಲ್ಲೇ ಮಾತನಾಡುತ್ತಾರೆ! ಇಲ್ಲಿನವರಿಗೆ ಕನ್ನಡ ಎಂದರೆ ಒಂದು ರೀತಿಯ ತಾತ್ಸಾರ...ಹೀಗಿರಬೇಕಾದರೆ ವಿದೇಶಿಗನೊಬ್ಬ ಕನ್ನಡದ ಬಗ್ಗೆ ಎಷ್ಟೊಂದು ಅಭಿಮಾನ ಹೊಂದಿದ್ದಾನೆ... ಆತನ ಕನ್ನಡ ಪ್ರೇಮ ಇಲ್ಲಿನ ಕನ್ನಡಿಗರನ್ನು ನಾಚಿಸುವಂತೆ ಮಾಡಿದೆ. ಈ ಮಹಾನ್ 'ಕನ್ನಡಿಗ' ಶ್ರೀ ಕ್ಷೇತ್ರ ಧರ್ಮಸ್ಥಳದ ಮಹಾಮಜ್ಜನದಲ್ಲಿ ಭಾಗವಹಿಸಿದ್ದಾನೆ. ಹಾಗೆಯೇ 'ಸಂಯುಕ್ತ ಕರ್ನಾಟಕ'ದೊಂದಿಗೆ ಅನುಭವ ಹಂಚಿಕೊಂಡಿದ್ದಾನೆ.

ಧರ್ಮಸ್ಥಳ, ಫೆ.2–ಕನ್ನಡ ಮಾತಾಡಲು ನಮಗೆ ತಿಳಿದಿದ್ದರೂ ನಾವೆಲ್ಲ ಎಷ್ಟು 'ಚೆನ್ನಾಗಿ' ಕನ್ನಡದ ಸದ್ಬಳಕೆ ಮಾಡುತ್ತಿದ್ದೇವೆ ಎಂಬುದು ನಗ್ನ ಸತ್ಯ! ಮಾತೃ ಭಾಷೆಯನ್ನು ಕಡೆಗಣಿಸಿ ಇಂಗ್ಲಿಷ್ ದಾಸ್ಯಕ್ಕೆ ನಾವು ಬಲಿಯಾಗಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ವಿದೇಶಿಗನೊಬ್ಬ ಕನ್ನಡಿಗರನ್ನು ನಾಚಿಸುವಂತಹ ಕಾರ್ಯವನ್ನು ಮಾಡಿದ್ದಾನೆ. ಕನ್ನಡದ ಮೇಲೆ ವಿಶೇಷ ಅಭಿಮಾನವನ್ನು ಹೊಂದಿ ಕನ್ನಡ ಭಾಷೆಯಲ್ಲೇ ಡಾಕ್ಟರೇಟ್ ಪದವಿ ಪಡೆದಿದ್ದಾರೆ ಈ ಜರ್ಮನ್ ಯುವಕ ! ಹೆಸರು ರೊಬರ್ಟ್ ಝೈಡ್ವನ್ ಬೋಸ್. ದೇಶ ನೆದರ್ಲ್ಯಾಂಡ್. ಹುಟ್ಟಿದ್ದು ಕೆನಡಾದಲ್ಲಿ. ತಂದೆ ನೆದರ್ಲ್ಯಾಂಡ್‌ನವರು. ತಾಯಿ ಇಂಡೋನೇಷಿಯಾದವಳು. ಆದರೆ ಈತನ ದೇಹದಲ್ಲಿ ಹರಿಯುತ್ತಿರುವುದು ಮಾತ್ರ ಕನ್ನಡದ ರಕ್ತ.ಕನ್ನಡ ಪ್ರೇಮ ಅಪಾರ. ಈತ ಕನ್ನಡ ಭಾಷೆಯನ್ನು ಎಷ್ಟು ಸುಲಲಿತವಾಗಿ ಮಾತನಾಡುತ್ತಾನೆಂದರೆ ಕನ್ನಡಿಗರು ಈತನ ಮುಂದೆ ನಾಚುವಂತಾಗಬೇಕು. ಕನ್ನಡ ಸಾಹಿತ್ಯ ಈತನ ನಾಲಿಗೆಯಲ್ಲಿ ಸುಲಲಿತವಾಗಿ ಹರಿಯುತ್ತದೆ.

ಶತಮಾನದ ಮೊದಲ ಮಹಾಮಜ್ಜನದಲ್ಲಿ ಈ ರೊಬರ್ಟ್ ಭಾಗವಹಿಸಿದ್ದಾರೆ. ಜೈನ ಧರ್ಮಕ್ಕೆ ಮತಾಂತರ ಹೊಂದಿದ ಇವರು ಜೈನ ಧರ್ಮದ ಆಳವಾದ ಅಧ್ಯಯನಕ್ಕಿಳಿದಿದ್ದಾರೆ.

ಜರ್ಮನಿ ಮ್ಯೂನಿಕ್ ಯುನಿವರ್ಸಿಟಿಯಲ್ಲಿ ಭಾರತೀಯ ಸಂಸ್ಕೃತಿ, ಕಲೆ, ಧಾರ್ಮಿಕ ದಾರ್ಶನಿಕತೆಗಳನ್ನೊಳಗೊಂಡ "ಇಂಡಾಲಜಿ" ಎಂಬ ವಿಷಯದ ಪ್ರೊಫೆಸರ್ ಆಗಿ ದುಡಿಯುತ್ತಿದ್ದಾರೆ. ವೀರಶೈವ, ಜೈನ ತತ್ವಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದಾರೆ.

'ಕನ್ನಡ ಗದ್ಯ ಸಾಹಿತ್ಯದಲ್ಲಿ ಇರುವ ಸಂಸ್ಕೃತಿ ವೈಶಿಷ್ಟ್ಯದ ಕಥಾವಸ್ತುಗಳು' ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ನೆದರ್ಲ್ಯಾಂಡ್‌ನ ಯೂಟ್ರೇಕ್ಟ್‌ನಲ್ಲಿ ಕೋಟದ ಪರಮೇಶ್ವರ ಐತಾಳ್‌ರಿಂದ ಕನ್ನಡವನ್ನು ಕಲಿತರು. ಇವರಿಗೆ ಸಂಸ್ಕೃತ ಜ್ಞಾನವೂ ಇದೆ.

ನಿಮಗೆ ತುಳು ಬರುತ್ತಾ ಎಂದು ಕೇಳಿದರೆ 'ಒಂತೆ ಒಂತೆ ಬರ್ಪುಂಡು.. ಆಂಡ ಪಾತೆರುಜಿ ಆತೆ....' ಎನ್ನುತ್ತಾರೆ. ಪ್ರಪಂಚದ 15 ಭಾಷೆಗಳನ್ನು ಸುಲಲಿತವಾಗಿ ಮಾತನಾಡುವ ಸಾಮರ್ಥ್ಯ ಹೊಂದಿದ್ದಾರೆ. ಈ ಪೈಕಿ ಸಂಸ್ಕೃತ,ಕನ್ನಡ, ಪ್ರಾಕೃತ, ಹಿಂದಿ, ಬೆಂಗಾಲಿ, ಆಸ್ಸಾಮಿ, ತಮಿಳು, ಉರ್ದು, ಪಾಲಿ ಎಂಬ ಭಾರತದ 9 ಭಾಷೆಗಳನ್ನು ಇವರು ಕಲಿತಿದ್ದಾರೆ.

1978ರಲ್ಲಿ ಭಾರತಕ್ಕೆ ಮೊದಲ ಭೇಟಿ ನೀಡಿದ ಇವರು 1983ರಿಂದ 2000ದ ವರೆಗೆ 17 ವರ್ಷಗಳ ಕಾಲ ಮೈಸೂರಿನಲ್ಲಿ ನೆಲೆಸಿ ನಂತರ ಜರ್ಮನಿಗೆ ಹಿಂದಿರುಗಿದರು.

'ಕರ್ನಾಟಕ ರಾಜ್ಯದಲ್ಲಿ ನನ್ನ ಅಧ್ಯಯನಗಳಿಗೆ ಉತ್ತಮ ಪರಿಸರವಿರುವುದರಿಂದ ಈ ರಾಜ್ಯವನ್ನು ನಾನು ಬಹುವಾಗಿ ಇಷ್ಟ ಪಡುತ್ತೇನೆ ಎನ್ನುವ ರಾಬರ್ಟ್, ಧರ್ಮಸ್ಥಳದ ಬಗ್ಗೆ ಹೇಳಲು ಶಬ್ದಗಳೇ ಇಲ್ಲ. ಇಲ್ಲಿಯ ವ್ಯವಸ್ಥೆ, ಪರಿಸರದ ವೈಶಿಷ್ಟ್ಯದ ಬಗ್ಗೆ ಎರಡು ಮಾತೇ ಇಲ್ಲ. ಅದಕ್ಕೋಸ್ಕರವೇ ನಾನು ವರ್ಷಂಪ್ರತಿ ಕ್ಷೇತ್ರಕ್ಕೆ ಭೇಟಿ ನೀಡುತ್ತಿರುತ್ತೇನ" ಎನ್ನುತ್ತಾರೆ.

ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು, ಚೋಮನ ದುಡಿ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಮೈಮನಗಳ ಸುಳಿಯಲ್ಲಿ– ಕೃತಿಗಳನ್ನು ಓದಿದ್ದೇನೆ ಎಂದು ಹೇಳುವ ರಾಬರ್ಟ್‌ರನ್ನು ಕಾರಂತರ "ಚೋಮನ ದುಡಿ" ಬಹುವಾಗಿ ಆಕರ್ಷಿಸಿದೆ.

ಸುಮತೀಂದ್ರ ನಾಡಿಗರು, ಯು.ಆರ್. ಅನಂತಮೂರ್ತಿ, ಅನುಪಮಾ ನಿರಂಜನ, ಶಾಂತನಾಥ ದೇಸಾಯಿ, ಬಸವರಾಜ ಕಟ್ಟೀಮನಿ ಸೇರಿದಂತೆ ಅನೇಕ ಲೇಖಕರ ಪರಿಚಯವನ್ನು ಇವರು ಹೊಂದಿದ್ದಾರೆ.

ಕೆಲವು ಸಾಂಪ್ರದಾಯಿಕ ಮಡಿವಂತರಿಂದ ನನಗೆ ತುಂಬಾ ಬೇಸರವಾಗಿದೆ. ಮಧ್ವ ಸಿದ್ಧಾಂತದ ಬಗ್ಗೆ ನಾನೊಮ್ಮೆ ಮಾತನಾಡುತ್ತಿದ್ದಾಗ, ನೀವು ಮುಂದಿನ ಜನ್ಮದಲ್ಲಿ ಮಧ್ವರಾಗಿ ಹುಟ್ಟಿ ಬನ್ನಿ, ಮತ್ತೆ ಮಧ್ವ ಸಿದ್ಧಾಂತದ ಬಗ್ಗೆ ಮಾತನಾಡಿ ಎಂದಿದ್ದರು. ಒಂದು ವಿಷಯದ ಬಗ್ಗೆ ಒಬ್ಬ ವ್ಯಕ್ತಿ ಕಲಿಯಲು ಆಸಕ್ತಿ ತೋರಿಸಿದಾಗ ಅತನನ್ನು ಉತ್ತೇಜಿಸಿ ಪ್ರೋತ್ಸಾಹ ನೀಡಬೇಕೆ ಹೊರತು ಈ ರೀತಿ ಮಾಡುವುದು ಸರಿಯೆ ಎಂದು ಪ್ರಶ್ನಿಸುತ್ತಾರೆ.

Manya Verlag München
Münchener Indologische Zeitschrift (MIZ)
www.manyaverlag.de